## ನಕ್ಕುಬಿಡಿ



**ಮೇಷ್ಟ್ರು:** ಅತಿ ವೇಗವಾಗಿ ಹಾರುವ ಪಕ್ಷಿ ಯಾವುದು?
**ಬಂಟಿ:** ಆನೆ ಸರ್!
**ಮೇಷ್ಟ್ರು:** ಅಷ್ಟು ಗೊತ್ತಿಲ್ವಾ ದಡ್ಡ, ನಿಮ್ಮ ತಂದೆ ಏನು ಮಾಡ್ತಾರೆ?
**ಬಂಟಿ:** ಒಂದು ದೊಡ್ಡ ಗ್ಯಾಂಗ್‌ಸ್ಟರ್‌ನಲ್ಲಿ ಶಾರ್ಪ್ ಶೂಟರ್ ಆಗಿದ್ದಾರೆ ಸರ್!
**ಮೇಷ್ಟ್ರು:** ನೋಡಿ ಮಕ್ಕಳೆ, ಬಂಟಿ ಹೇಳಿದ ಉತ್ತರ ಸರಿಯಾಗಿದೆ ಎಲ್ಲರೂ ಆದನ್ನೇ ಬರೆದುಕೊಳ್ಳಿ.

***

**ರೋಗಿ:** ಡಾಕ್ಟ್ರೆ! ನನ್ನ ಶುಶ್ರೂಷೆಗೆ ದಯವಿಟ್ಟು ಸುಂದರವಾಗಿರುವ ಯಂಗ್ ನರ್ಸ್‌ಗಳನ್ನೆ ನೇಮಿಸಿ.
**ಡಾಕ್ಟರ್:** ಅರೇ! ನಿಮಗಾಗಲೇ ಎಂಬತ್ತು ವರ್ಷ. ಕಾಯಿಲೆ ಬೇರೆ. ನಿಮಗೇಕೆ ಈ ವಯಸ್ಸಿಗೆ ಇಂತಹ ಚಪಲ.
**ರೋಗಿ:** ಹಾಗಲ್ಲ ಡಾಕ್ಟ್ರೆ, ಚೆಂದದ ನರ್ಸ್‌ಗಳಿದ್ದರೆ ನನ್ನ ಮಗ ನನ್ನ ನೋಡಲು ಯಾವಾಗಲೂ ಆಸ್ಪತ್ರೆಗೆ ಬರ್ತಿರುತ್ತಾನೆ ಅದಕ್ಕೆ.

***

ಮಾವ ಅಳಿಯನಿಗೆ ವರದಕ್ಷಿಣೆಯ ಜೊತೆಗೆ ಹೆಲ್ಮೆಟ್ ಕೂಡ ಕೊಟ್ಟರು.
**ಅಳಿಯ:** ನನ್ನ ಹತ್ರ ಬೈಕ್ ಇಲ್ಲವಲ್ಲ ಈ ಹೆಲ್ಮೆಟ್ ಯಾಕೆ?
**ಮಾವ:** ಹೇ ಅಳಿಯಂದ್ರೆ ಸುಮ್ನೆ ಇಟ್ಕೊಳಿ. ಮುಂದೆ ಇದರ ಉಪಯೋಗ ಬಹಳ ಇದೆ. ಏಕೆಂದರೆ ನಿಮ್ಮ ಅತ್ತೆ ತನ್ನ ಮಗಳಿಗೆ ಸ್ಟೀಲ್ ಲಟ್ಟಣಿಗೆ ಕೊಟ್ಟಿದ್ದಾಳೆ.

***

**ವಿಕ್ಕಿ:** ನಾನೊಂದು ಹೊಸ ಮೊಬೈಲ್ ತಗೊಂಡೆ.
**ಪಿಂಕಿ:** ಓಹ್ ವಾವ್! ಹಾಗಾದ್ರೆ ನನಗೆ ಪಾರ್ಟಿ ಕೊಡಿಸು. ಪಾರ್ಟಿ ಆದ ಮೇಲೆ...
**ಪಿಂಕಿ:** ಪಾರ್ಟಿ ಕೊಡಿಸುವುದಕ್ಕೆ ದುಡ್ಡು ಎಲ್ಲಿಂದ ಬಂತು?
**ವಿಕ್ಕಿ:** ಆ ಹೊಸ ಫೋನ್ ಮಾರಿ ಪಾರ್ಟಿ ಕೊಡಿಸಿದ್ದು.

***

**ಕಚೇರಿ ಗುಮಾಸ್ತ:** ನಿನ್ನ ಕೆಲಸ ಆಗಬೇಕಾದರೆ ಸ್ವಲ್ಪ ಕೈ ಬೆಚ್ಚಗೆ ಮಾಡಬೇಕಾಗುತ್ತದೆ.
**ಬೋರಣ್ಣ:** ನನಗೂ ಗೊತ್ತು ಸ್ವಾಮಿ. ಅದಕ್ಕೆಂತಲೇ ನಮ್ಮೂರ್ರ ಅಗಸರಾಯಪ್ಪ ಕೆಂಡ ಹಾಕಿ ಬಿಸಿ ಮಾಡಿಟ್ಟ ಇಸ್ತ್ರಿಪೆಟ್ಟಿಗೆ ತಂದಿವ್ನಿ. ಕೊಡಿ ಕೈ ಬೆಚ್ಚಗೆ ಯಾಕೆ, ಇಸ್ತ್ರೀನೇ ಮಾಡಿಬಿಡ್ತಿನಿ.

***

**ಡಾಕ್ಟರ್:** ಏನಯ್ಯ ನಿನ್ನ ಹೊಟ್ಟೆಯಲ್ಲಿ ಸುಮಾರು ಚಮಚಗಳಿವೆ.
**ಗುಂಡ:** ನೀವೇ ಹೇಳಿದ್ರಲ್ಲ ಡಾಕ್ಟ್ರೆ! ಈ ಟಾನಿಕ್ ಎರಡು ಚಮಚ ತಗೋಬೇಕು ಅಂತ.

***

**ಸುಮಾ:** ನನ್ನ ಗಂಡ ಬಹಳ ಬುದ್ಧಿವಂತ. ಅವರು ಏನಾದರೂ ಬರೆದರೆ ಬೇರೆಯವರಾರು ಅದನ್ನು ಓದುವುದಕ್ಕೆ ಆಗಲ್ಲ.
**ರಮಾ:** ನನ್ನ ಗಂಡನು ಅಷ್ಟೆ ತುಂಬಾ ಬುದ್ಧಿವಂತ. ಅವರು ಬರೆದದ್ದು ಅವರಿಗೇ ಓದುವುದಕ್ಕೆ ಆಗಲ್ಲ.

***

**ರಮೇಶ್:** ಏನಯ್ಯ ನಿನಗೆ ಕುಡಿತ ಕೆಟ್ಟದ್ದು, ಬಿಡಬೇಕು ಅನಿಸಲ್ವ?
**ಸುರೇಶ್:** ಅನಿಸುತ್ತೆ ಕುಡಿದ ಮೇಲೆ ಅನಿಸುತ್ತೆ ಕುಡಿಯದೆ ಇರುವಾಗ ಅನಿಸಲ್ಲ.

ಸಂಗ್ರಹ: ಶರದ ಕುಲಕರ್ಣಿ, ಬೀದರ್

## ಓದುಗರಿಗೂ ಸುಗ್ಗಿ ಕಾಲ

# ಸುಧಾ

## ಯುಗಾದಿ ವಿಶೇಷಾಂಕ-2026

ಓದುಗರ ಸಹಭಾಗಿತ್ವ ಇಲ್ಲದೆ 'ಯುಗಾದಿ ಸಂಚಿಕೆ' ಕಳೆಗಟ್ಟುವುದು ಹೇಗೆ? ಇದೋ ಇಲ್ಲಿದೆ, ಓದುಗರ ಅಭಿವ್ಯಕ್ತಿಗೊಂದು ಆಹ್ವಾನ. 2026ರ 'ಸುಧಾ' ಯುಗಾದಿ ವಿಶೇಷಾಂಕಕ್ಕಾಗಿ ಓದುಗರ ವೇದಿಕೆಗೆ ಎರಡು ವಿಷಯಗಳನ್ನು ಸೂಚಿಸಲಾಗಿದೆ.

## ಓದುಗರ ವೇದಿಕೆ






**ಬದುಕು ಬದಲಿಸಿದ ಪುಸ್ತಕ**

- ಬರಹಗಳು 250 ಶಬ್ದ ಮೀರದಿರಲಿ.
- ಸ್ಪರ್ಧೆಗೆ ಕಳುಹಿಸುವ ಬರಹಗಳು ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಜಾಲತಾಣ, ಸಾಮಾಜಿಕ ಜಾಲತಾಣ ಸೇರಿದಂತೆ ಯಾವುದೇ ಮಾಧ್ಯಮದಲ್ಲಿ ಈ ಮೊದಲು ಪ್ರಕಟಗೊಂಡಿರಬಾರದು.
- ಬರಹದ ಜೊತೆಯಲ್ಲಿ ಪ್ರತ್ಯೇಕ ಹಾಳೆಯಲ್ಲಿ ವಿಳಾಸ, ದೂರವಾಣಿ ಸಂಖ್ಯೆ ಬರೆಯಿರಿ. ಜೊತೆಗೆ ನಿಮ್ಮ ಫೋಟೊ ಕೂಡ ಇರಲಿ.
- ಲಕೋಟೆ ಮೇಲೆ ಅಥವಾ ಇಮೇಲ್‌ನಲ್ಲಿ 'ಯುಗಾದಿ ಓದುಗರ ವೇದಿಕೆ'ಗೆ ಎಂದು ನಮೂದಿಸಿ.
- 'ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್' ಸಿಬ್ಬಂದಿ ಮತ್ತು ಅವರ ಕುಟುಂಬ ವರ್ಗದವರು ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.
- ನುಡಿ–ಯುನಿಕೋಡ್‌ನಲ್ಲಿ ಪ್ರಬಂಧಗಳನ್ನು ಇ–ಮೇಲ್ ಮಾಡಬಹುದು.

**ಕೊನೆಯ ದಿನಾಂಕ**
**ಜನವರಿ 20, 2026**

ವಿಳಾಸ: ಸಂಪಾದಕರು,
ಸುಧಾ ಯುಗಾದಿ ವಿಶೇಷಾಂಕ, ಓದುಗರ ವೇದಿಕೆ, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001

ಇ–ಮೇಲ್: ugadi@sudha.co.in